

ಬುದ್ಧ, ಬಸವ, ಅಂಬೇಡ್ಕರ್ ಜಯಂತಿಗಳ ಆಚರಣೆ ನೆಪದಲ್ಲಿ ನಡೆದ ಸಾಮೂಹಿಕ ವಿವಾಹ ಕಾರ್ಯಕ್ರಮ



ಮದುವೆ ಸರಳವಾದಷ್ಟೂ ಗಂಡು ಹೆಣ್ಣಿನ ಜೊತೆಗೆ, ಇಬ್ಬರ ಕುಟುಂಬಗಳೂ ಆತ್ಮಾಭಿಮಾನದಿಂದ ಬದುಕುವುದು ಸಾಧ್ಯವಾಗುತ್ತದೆ.

5. ಸರಳವಾಗಿ ಮದುವೆಯಾಗುವುದು ಆದರ್ಶದ ಮಾದರಿಯೂ ಹೌದು. ಮದುವೆಯನ್ನು ಅರ್ಥಪೂರ್ಣಗೊಳಿಸುವ ಪ್ರಯತ್ನವೂ ಹೌದು. ಮುಖ್ಯವಾಗಿ, ಬಹುಜನರಿಗೆ ಅರ್ಥವಾಗದ ವಿಧಿವಿಧಾನಗಳಿಂದ ಹೊರಬಂದು, ವಾಸ್ತವದ ನೆಲೆಗಟ್ಟಿನಲ್ಲಿ ದಾಂಪತ್ಯದ ಅನುಬಂಧ ಸರಳ ಮದುವೆಗಳಲ್ಲಿ ಸಾಧ್ಯವಾಗುತ್ತದೆ.

6. ಆಡಂಬರದ ಪ್ರದರ್ಶನದಿಂದ ಮುಕ್ತವಾದ ಸರಳ ಮದುವೆ ಬೌದ್ಧಿಕ ಚಿಂತನೆಯ ಅಭಿವ್ಯಕ್ತಿಯೂ ಹೌದು.

ಸಾಮಾಜಿಕ ಬದಲಾವಣೆಯ ಬಗ್ಗೆ ಕಾಳಜಿಯುಳ್ಳವರಿಗೆ ಸರಳ ಮದುವೆ ಹೇಳಿ ಮಾಡಿಸಿದಂತಹದ್ದು. ಸರಳ ಮದುವೆಯನ್ನು ಅನುಸರಿಸುವವರು, ಮದುವೆಯ ಅದ್ದೂರಿತನವನ್ನು ತಿರಸ್ಕಾರದಿಂದ ಕಾಣಬೇಕೆಂದು ಅರ್ಥವಲ್ಲ. ವೈಭವದ ಮದುವೆಗಳಿಂದಾಗಿ ಹಣದ ಹರಿವುಂಟಾಗಿ ಉದ್ಯೋಗ ಸೃಷ್ಟಿಯಾಗುವುದರ ಹಿನ್ನೆಲೆಯಲ್ಲಿ ಅಂಥ ಮದುವೆಗಳನ್ನು ನಿರಾಕರಿಸಲಾಗದು. ಮಕ್ಕಳ ಮದುವೆಯನ್ನು ಅದ್ದೂರಿಯಾಗಿ ಮಾಡಬೇಕೆಂದು ಪೋಷಕರು ಬಯಸುವುದು ತಪ್ಪೂ ಅಲ್ಲ. ಆದರೆ, ಮದುವೆಗಾಗಿ ತಮ್ಮ ಸಾಮರ್ಥ್ಯ ಮೀರಿ ದುಡ್ಡು ಖರ್ಚು ಮಾಡುವುದು, ಸಾಲ ಮಾಡುವುದು ಸರಿಯಲ್ಲ. ಸರಳತೆಯನ್ನು ಬಯಸುವವರು ಹಾಗೂ ಅರ್ಥಪೂರ್ಣ ಮದುವೆಯನ್ನು ಹಂಬಲಿಸುವವರಿಗೆ ಸರಳ ಮದುವೆ ಈ ಕಾಲದ ಅಗತ್ಯದಂತೆ ಕಾಣಿಸಿದರೆ ಅಚ್ಚರಿಯೇನಿಲ್ಲ.

ಪ್ರತಿಕ್ರಿಯಿಸಿ: **feedback@sudha.co.in**